ನಿಯಮಗಳ ಪ್ರಕಾರ ಈಗಾಗಲೇ ಸ್ಥಳವನ್ನು ಇಲಾಖೆಯವರಿಗೆ ಮನೆ ಕಟ್ಟಲು ವಹಿಸಿಕೊಟ್ಟಿರುವರು. ಆದಕಾರಣ, ಕೂಡಲೇ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಮನೆಗಳನ್ನು ಕಟ್ಟಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮೀನುಗಾರಿಕೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷಣೆಯವರೇ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು, ಕೆಂಗಾನೂರು ಮತ್ತು ಸೌಂದತ್ತಿ ತಾಲ್ಲೂಕಿನ ಮಾಟೊಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿ ವೃತ್ತಿನಿರತ ನಿರ್ವಸತಿ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಿದ್ದು ಈ ಬಗ್ಗೆ ಅಧೀನ ಅಧಿಕಾರಿಗಳಿಂದ ಸೂಕ್ತ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಸೌಂದತ್ತಿ ತಾಲ್ಲೂಕಿನ ಚೌಡಯ್ಯ ಮೀನುಗಾರರ ಸಹಕಾರ ಸಂಘದವರ ಮೆಟೊಳ್ಳಿ ಗ್ರಾಮದಿಂದ 37 ಅರ್ಜಿಗಳನ್ನು ಮತ್ತು ಎಕ್ಕುಂಡಿ ಗ್ರಾಮದಿಂದ 27 ಅರ್ಜಿಗಳನ್ನು ಕಳುಹಿಸಿದ್ದು ಸದ್ಯಕ್ಕೆ ಮೀನುಗಾರರ ಸ್ವಂತ ನಿವೇಶನಗಳನ್ನು ಹೊಂದಿದ್ದು, ಅವರಿಗೆ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಕಲ್ಪಿಸಲು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಲು ಬೆಳಗಾವಿ ಜಿಲ್ಲಾ ಪರಿಷತ್ತಿನ ಕಾರ್ಯನಿರ್ವಾಹಕ ಅಭಿಯಂತರರನ್ನು ಕೋರಿದೆ. ಸೂಕ್ತ ಪ್ರಸ್ತಾವನೆಯು ಅಧೀನ ಅಧಿಕಾರಿಗಳಿಂದ ಬಂದ ಕೂಡಲೇ ಮಂಜೂರಾತಿಯ ಬಗ್ಗೆ ಪರಿಶೀಲಿಸಲಾಗುವುದು.

4) ಕರ್ನಾಟಕದ ಹೆಚ್ಚುವರಿ ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುವಲ್ಲಿ ತೊಂದರೆ.

1.35 ಪಿ ಎಂ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಉಪಾಧ್ಯಕ್ಷಣೆಯವರೆ, ಕರ್ನಾಟಕದಿಂದ ಹೆಚ್ಚುವರಿ ಕಬ್ಬನ್ನು ಗಡಿ ರಾಜ್ಯಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರಕ್ಕೆ ಸಾಗಿಸುವ ಹಿನ್ನೆಲೆಯಲ್ಲಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕಾಗಿದೆ. ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಕಬ್ಬನ್ನು ನುರಿಸುವ ಸ್ಥಿತಿಯಲ್ಲಿ ಇಲ್ಲ. ಇದರಿಂದಾಗಿ ಯೋಗ್ಯ ಸಮಯದಲ್ಲಿ ಕಬ್ಬನ್ನು ಕಳುಹಿಸಿಕೊಡುವ ಉದ್ದೇಶಕ್ಕಾಗಿ ರೈತರು ಆಸೆ ಪಟ್ಟಿದ್ದಾರೆ. ಯಾವುದೇ ತೆರಿಗೆ ಇಲ್ಲದೇ ಹೆಚ್ಚುವರಿ ಕಬ್ಬನ್ನು ಬೇರೆ ರಾಜ್ಯಕ್ಕೆ ಕಳುಹಿಸಿಕೊಡುವ ಸರ್ಕಾರದ ಹಿಂದಿನ ನೀತಿಯನ್ನು ಮುಂದುವರಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆ ಏನು ಎಂದು ಮಾನ್ಯ ಮುಖ್ಯ ಮಂತ್ರಿಗಳಿಂದ ಸದನದಲ್ಲಿ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ನಮ್ಮ ರಾಜ್ಯದ ಕಬ್ಬಿನ ಉತ್ಪಾದನೆ ವಿಚಾರದಲ್ಲಿ ಈಗಾಗಲೇ ಆ ಭಾಗದ ಶಾಸಕರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಇವತ್ತು ಅಥವಾ ನಾಳೆ ಈ ಬಗ್ಗೆ ಒಂದು ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನೂ ಕೂಡ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಕೂಡ ಚರ್ಚೆ ಮಾಡಿದ್ದೀರಿ. ಆ ಭಾಗದ ಎಲ್ಲಾ ಶಾಸಕರು ಮಾಡಿದ್ದಾರೆ. ಈ ಬಗ್ಗೆ ಇವತ್ತು ಅಥವಾ ನಾಳೆ ಸೂಕ್ತ ನಿರ್ಣಯ ತೆಗೆದುಕೊಂಡು ಪ್ರಕಟನೆ ಮಾಡುತ್ತೇವೆ.